ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 23-01-1980.

# *ಪವಿತ್ರತೆಯ ಮಹತ್ವ* (पवित्रता का महत्व)

ಬಾಪ್‌ದಾದಾರವರು ತನ್ನ ಸರ್ವ ಮಹಾನ್ ಆತ್ಮರು, ಧರ್ಮಾತ್ಮರು, ಪುಣ್ಯಾತ್ಮರು, ಮಹಾನ್ ಪವಿತ್ರಾತ್ಮರನ್ನು ನೋಡುತ್ತಾ ಹರ್ಷಿತವಾಗುತ್ತಾರೆ. ಪರಮಾತ್ಮನ ಮಕ್ಕಳು ಪರಮಪವಿತ್ರವಾದ ಮಕ್ಕಳಾಗಿದ್ದಾರೆ. ಪವಿತ್ರತೆಯೇ ಮಹಾನತೆಯಾಗಿದೆ. ಪವಿತ್ರತೆಯ ಮಾನ್ಯತೆಯಿದೆ. ಪವಿತ್ರತೆಯ ಕಾರಣದಿಂದಲೇ ಪರಮಪೂಜ್ಯ ಹಾಗೂ ಗಾಯನಾ ಯೋಗ್ಯರಾಗುತ್ತಾರೆ. ಪವಿತ್ರತೆಯೇ ಶ್ರೇಷ್ಠಧರ್ಮ ಅರ್ಥಾತ್ ಧಾರಣೆಯಾಗಿದೆ. ಈ ಈಶ್ವರನ ಸೇವೆಯ ಅತಿದೊಡ್ಡ ಪುಣ್ಯವಾಗಿದೆ ಪವಿತ್ರತೆಯ ದಾನ ಕೊಡುವುದು. ಪವಿತ್ರ ಆತ್ಮನೇ ಪುಣ್ಯಾತ್ಮನಾಗಬೇಕಾಗಿದೆ ಏಕೆಂದರೆ ಯಾವುದೇ ಆತ್ಮನನ್ನು ಆತ್ಮಘಾತದ ಮಹಾಪಾಪದಿಂದ ಮುಕ್ತಗೊಳಿಸುತ್ತೀರಿ. ಅಪವಿತ್ರತೆಯು ಆತ್ಮಘಾತವಾಗಿದೆ. ಪವಿತ್ರತೆಯ ಪ್ರಾಣದಾನವಾಗಿದೆ. ಪವಿತ್ರರನ್ನಾಗಿ ಮಾಡುವುದು ಅರ್ಥಾತ್ ಪುಣ್ಯಾತ್ಮರನ್ನಾಗಿ ಮಾಡುವುದಾಗಿದೆ. ಆ ಗೀತೆಯ ಜ್ಞಾನವು ವರ್ತಮಾನದಲ್ಲಿ ಪರಮಾತ್ಮನ ಜ್ಞಾನವನ್ನೇನು ತಾವು ಸಾರರೂಪದಲ್ಲಿ ಸ್ಲೋಗನ್‌ನ್ನಾಗಿ ಮಾಡುತ್ತೀರಿ, ಅದರಲ್ಲಿಯೂ ಪವಿತ್ರತೆಯ ಮಹತ್ವವನ್ನು ತಿಳಿಸುತ್ತೀರಿ. "ಪವಿತ್ರರಾಗಿ-ಯೋಗಿಗಳಾಗಿ" ಇದೇ ಸ್ಲೋಗನ್ ಮಹಾನ್ ಆತ್ಮನಾಗಲು ಆಧಾರವಾಗಿದೆ. ಬ್ರಾಹ್ಮಣ ಜೀವನದ ಪುರುಷಾರ್ಥದ ಅಂಕಗಳೂ ಸಹ ಪವಿತ್ರತೆಯ ಆಧಾರದ ಮೇಲಿದೆ. ಭಕ್ತಿಮಾರ್ಗದಲ್ಲಿ ನೆನಪಾರ್ಥವು ಪವಿತ್ರತೆಯ ಆಧಾರದ ಮೇಲಿದೆ. ಯಾವುದೇ ಭಕ್ತನು ತಮ್ಮ ನೆನಪಾರ್ಥ(ಸ್ಮೃತಿಚಿಹ್ನೆ) ಚಿತ್ರಗಳನ್ನು ಪವಿತ್ರತೆಯಿಲ್ಲದೆ ಟಚ್ ಸಹ ಮಾಡಲು ಸಾಧ್ಯವಿಲ್ಲ. ಯಾವ ದಿನದಂದು ವಿಶೇಷವಾಗಿ ದೇವಿ ಅಥವಾ ದೇವತೆಗಳ ದಿನವನ್ನಾಚರಿಸುತ್ತಾರೆಯೋ, ಆ ದಿನದ ಮಹತ್ವಿಕೆಯೂ ಪವಿತ್ರತೆಯಾಗಿದೆ. ಭಕ್ತಿಯ ಅರ್ಥವೇ ಆಗಿದೆ- ಅಲ್ಪಕಾಲ. ಜ್ಞಾನದ ಅರ್ಥವೇ ಆಗಿದೆ- ಸದಾಕಾಲ. ಅಂದಮೇಲೆ ಭಕ್ತರು ಅಲ್ಪಕಾಲದ ನಿಯಮಗಳ ಪಾಲನೆಯನ್ನು ಮಾಡುತ್ತಾರೆ. ಹೇಗೆ ನವರಾತ್ರಿಯನ್ನಾಚರಿಸುತ್ತಾರೆ, ಜನ್ಮಾಷ್ಟಮಿ ಅಥವಾ ದೀಪಾವಳಿ ಅಥವಾ ಯಾವುದೇ ವಿಶೇಷವಾದ ಉತ್ಸವವನ್ನಾಚರಿಸುವಾಗ ಪವಿತ್ರತೆಯ ನಿಯಮವನ್ನು ಅವಶ್ಯವಾಗಿ ಅಲ್ಪಕಾಲಕ್ಕಾಗಿ ಪಾಲನೆ ಮಾಡುತ್ತಾರೆ. ಭಲೆ ಶರೀರದ ಪವಿತ್ರತೆ ಅಥವಾ ಆತ್ಮನ ನಿಯಮ, ಎರಡೂ ಪ್ರಕಾರದ ಶುದ್ಧಿಯನ್ನು ಅವಶ್ಯವಾಗಿ ಇಡುತ್ತಾರೆ.

ತಮ್ಮ ನೆನಪಾರ್ಥವಾದ 'ವಿಜಯಮಾಲೆ'- ಅದರ ಸ್ಮರಣೆಯನ್ನು ಮಾಡುವಾಗಲೂ ಪವಿತ್ರತೆಯನ್ನು ವಿಧಿಪೂರ್ವಕವಾಗಿ ಪಾಲನೆ ಮಾಡುತ್ತಾರೆ. ತಾವು ಸಿದ್ಧಿಸ್ವರೂಪರಾಗುತ್ತೀರಿ, ಸಿದ್ಧಿಸ್ವರೂಪ ಆತ್ಮರ ಪೂಜೆಯೂ ವಿಧಿಪೂರ್ವಕವಾಗಿಯೇ ಆಗುತ್ತದೆ. ಪವಿತ್ರತೆಯ ಮಹತ್ವಿಕೆಯನ್ನು ತಿಳಿದಿದ್ದೀರಲ್ಲವೇ? ಆದ್ದರಿಂದ ಮೊದಲ ಮುಖ್ಯವಾದ ಪರೀಕ್ಷಾ ಪತ್ರಿಕೆಯಲ್ಲಿ ಪವಿತ್ರತೆಯನ್ನು ಪರಿಶೀಲನೆ ಮಾಡಿದ್ದೀರಾ, ಪ್ರತಿಯೊಬ್ಬರೂ ತಮ್ಮ ಪವಿತ್ರತೆಯ ಪರೀಕ್ಷಾಪತ್ರಿಕೆಯನ್ನು ಪರಿಶೀಲನೆ ಮಾಡಿದ್ದೀರಾ? ಕಾರ್ಯಕ್ರಮದನುಸಾರವಾಗಿ ಪ್ರಗತಿಯನ್ನಂತು ಮಾಡಿದ್ದೀರಿ.

ಪೂರ್ಣಫಲಿತಾಂಶದಲ್ಲಿ ಎಲ್ಲದಕ್ಕಿಂತ ಹೆಚ್ಚಿನದಾಗಿ, ಮೆಜಾರಿಟಿಯಲ್ಲಿ ಕರ್ಮಣಾದಲ್ಲಿ ಪರ್ಸೆಂಟೇಜ್ ಸರಿಯಿದೆ. ವಾಚಾದಲ್ಲಿ ಕರ್ಮಣಾದ ಫಲಿತಾಂಶಕ್ಕಿಂತಲೂ 25% ಕಡಿಮೆಯಿದೆ. ಮನಸಾ ಸೇವೆಯಲ್ಲಿ ಕರ್ಮಣಾದ ಫಲಿತಾಂಶಕ್ಕಿಂತ 50% ಕಡಿಮೆ. ಕೆಲವರು ಪುರುಷಾರ್ಥ ಮಾಡುವುದರಲ್ಲಿ ಮನಸಾ, ಸಂಕಲ್ಪ ಮತ್ತು ಸ್ವಪ್ನದಲ್ಲಿ ಸ್ವಲ್ಪ-ಸ್ವಲ್ಪ ವ್ಯತ್ಯಾಸವಿತ್ತು, ಅದರಲ್ಲಿಯೂ ಜನ್ಮದಿನದಿಂದ ಈಗಿನವರೆಗಿನ ಫಲಿತಾಂಶದಲ್ಲಿ ಏರಿಳಿತಗಳಾಯಿತು, ಮಚ್ಚೆಯುಂಟಾಯಿತು. ನಂತರ ಸಮಾಪ್ತಿ ಮಾಡಿದರು, ಕೆಲವೊಮ್ಮೆ ಸಂಕಲ್ಪವು ಬಂದಿತು ಮತ್ತು ದೂರ ಗೊಳಿಸಲಾಯಿತು, ಕೆಲವೊಮ್ಮೆ ವಾಚಾ-ಕರ್ಮಣಾದ ಮಚ್ಚೆಯಾಯಿತು ಮತ್ತು ಸಮಾಪ್ತಿ ಮಾಡಲಾಯಿತು. ಈ ರೀತಿ ದೂರಗೊಳಿಸುವ ಮತ್ತು ಸಮಾಪ್ತಿ ಮಾಡುವವರು ಬಹಳಷ್ಟಿದ್ದರು. ಆದರೆ ಕೆಲವರು ತೀವ್ರ ಪುರುಷಾರ್ಥಿಯಾಗಿರುವುದನ್ನೂ

ನೋಡಿದೆವು. ಅವರು ಇಂತಹ ಸಂಸ್ಕಾರಗಳ ಮಚ್ಚೆಯನ್ನು ಸಮಾಪ್ತಿ ಮಾಡಿದ್ದಾರೆ, ಅವರಲ್ಲಿ ಈಗಿನವರೆಗೂ ಸಂಪೂರ್ಣ ಸ್ವಚ್ಛ, ಶುದ್ಧವಾದ ಪರೀಕ್ಷಾಪತ್ರಿಕೆಯು ಕಂಡು ಬಂದಿತು. ಅದೇ ರೀತಿ ಸ್ವಪ್ನದವರೆಗೂ ಸಮಾಪ್ತಿಯಾಗಿತ್ತು. ಪಾಸ್-ವಿತ್-ಆನರ್ ಆಗುವವರು ಮಹಾನ್ ಪವಿತ್ರ ಆತ್ಮರನ್ನೂ ನೋಡಿದೆವು, ಅವರ ವಿಶೇಷತೆಯನ್ನೇನು ನೋಡಿದೆವು!

ಯಾವಾಗಿನಿಂದ ಬ್ರಾಹ್ಮಣ ಜನ್ಮವಾಗಿತ್ತೋ. ಆಗಿನಿಂದ ಈಗಿನವರೆಗೂ ಪುರುಷಾರ್ಥ ಮಾಡುವ ಅವಶ್ಯಕತೆಯಿರಲಿಲ್ಲ. ಆದರೆ ಬ್ರಾಹ್ಮಣ ಜೀವನದ ವಿಶೇಷ ಲಕ್ಷಣವಿದೆ, ಬ್ರಾಹಣ ಆತ್ಮನಲ್ಲಿ ಆ ಅನಾದಿ- ಆದಿ ಸಂಸ್ಕಾರವಿದೆ. ಇಂತಹ ಸ್ವಾಭಾವಿಕವಾದ ಸಂಸ್ಕಾರದಿಂದ ಸ್ವಪ್ನ .ಅಥವಾ ಸಂಕಲ್ಪದಲ್ಲಿಯೂ ಅಪವಿತ್ರತೆಯು ಇಮರ್ಜ್ ಆಗಿರಲಿಲ್ಲ. ಅವರಲ್ಲಿ ಸಂಕಲ್ಪವು ಬಂದಿತು ಮತ್ತು ವಿಜಯಿಯಾದರು, ಇದಕ್ಕಿಂತಲೂ ಮೇಲಿರುವ ಸ್ವಾಭಾವಿಕ ಸಂಸ್ಕಾರದ ರೂಪದಲ್ಲಿ ಹೊರಟಿದ್ದರು. ಈ ವಿಷಯದಲ್ಲಿ ಪುರುಷಾರ್ಥವನ್ನು ಮಾಡುವ ಅವಶ್ಯಕತೆಯೇ ಇರಲಿಲ್ಲ. ಇಂತಹ ಪರಮಪೂಜ್ಯ ಸಂಸ್ಕಾರವನ್ನೂ ನೋಡಿದೆವು ಆದರೆ ಮೈನಾರಿಟಿಯಲ್ಲಿ ಇತ್ತು. ಜ್ಞಾನಪೂರ್ಣರಾಗಿದ್ದರೂ, ಅನ್ಯರಿಗೆ ಪರಮಪವಿತ್ರರಾಗುವ ವಿಧಿಯನ್ನು ತಿಳಿಸುತ್ತಿದ್ದರೂ, ಸ್ವಯಂ ಸದಾ ಕೇಳುತ್ತಿದ್ದರೂ, ತಿಳಿದುಕೊಂಡಿದ್ದರೂ ಸದಾ ಸ್ವಚ್ಛವಾಗಿರುವುದು ಅರ್ಥಾತ್ ಪವಿತ್ರತೆಯ ವಿಷಯದಲ್ಲಿ ಸಿದ್ಧಿಸ್ವರೂಪರಾಗಿದ್ದಾರೆ. ಆದ್ದರಿಂದ ಇಂತಹ ಪರಮಪವಿತ್ರ ಆತ್ಮರ ಪೂಜೆಯೂ ಸಹ ವಿಧಿಪೂರ್ವಕವಾಗಿಯೇ ಸದಾ ಆಗುತ್ತದೆ. ಅಷ್ಟದೇವತೆ ರೂಪದಲ್ಲಿಯೂ ಪೂಜೆ ಮತ್ತು ಭಕ್ತರ ಇಷ್ಟದೇವತೆ ರೂಪದಲ್ಲಿಯೂ ಪೂಜೆಯಾಗುತ್ತದೆ. ಅಷ್ಟಶಕ್ತಿಗಳ ಪ್ರತ್ಯಕ್ಷಸ್ವರೂಪದಲ್ಲಿ 'ಅಷ್ಟದೇವತೆ'ಯಾಗಿ ಪ್ರತ್ಯಕ್ಷವಾಗುತ್ತಾರೆ. ಅಂದಮೇಲೆ ಪರೀಕ್ಷೆಯ ಫಲಿತಾಂಶವನ್ನು ಕೇಳಿದಿರಾ.

ಅಂದಮೇಲೆ ಮನಸಾ ಪರಿವರ್ತನೆಯಾಗಬೇಕು, ಇದರಲ್ಲಿ ಡಬಲ್ ಗಮನವನ್ನು ಕೊಡಬೇಕಾಗಿದೆ. ಈ ರೀತಿ ಯೋಚಿಸಬಾರದು- ಸಂಪನ್ನರಾಗುವವರೆಗೂ ಸಂಕಲ್ಪವಂತು ಬರುತ್ತಾ ಇರುತ್ತದೆ ಎಂಬಂತೆ ಆಗಬಾರದು. ಸಂಕಲ್ಪ ಎಂದರೆ ಯೋಗಾಗ್ನಿಯಲ್ಲಿ ಬೀಜವನ್ನೇ ಸುಟ್ಟುಹಾಕಬೇಕು. ಅದರಿಂದ ಅರ್ಧಕಲ್ಪದವರೆಗೂ ಬೀಜವು ಫಲವನ್ನೇ ಕೊಡಬಾರದು. ಅಂದಾಗ ವಾಚಾದ ಎರೆಡು ಮುಖ್ಯವಾದ ಎಲೆಗಳೂ ಬರಲು ಸಾಧ್ಯವಿಲ್ಲ. ಕರ್ಮಣಾದ ಕಾಂಡ ಮತ್ತು ರೆಂಬೆ-ಕೊಂಬೆಗಳೂ ಬರಲು ಸಾಧ್ಯವಿಲ್ಲ. ಬಹಳಕಾಲದಿಂದ ಭಸ್ಮವಾಗಿರುವ ಬೀಜವು ಜನ್ಮ- ಜನ್ಮಾಂತರಕ್ಕಾಗಿ ಫಲವನ್ನು ಕೊಡುವುದಿಲ್ಲ. ಅಂತ್ಯದಲ್ಲಿ ಈ ವಿಷಯದಲ್ಲಿ ಸಂಪೂರ್ಣರಾಗುವುದಲ್ಲ ಆದರೆ ಬಹಳಕಾಲದ ಅಭ್ಯಾಸವೇ ಅಂತ್ಯದಲ್ಲಿ ಉತ್ತೀರ್ಣ ಮಾಡಿಸುತ್ತದೆ. ಅಂತ್ಯದಲ್ಲಿ ಸಂಪೂರ್ಣರಾಗುತ್ತೇವೆ ಎನ್ನುವ ಸಂಕಲ್ಪವನ್ನು ಮೊದಲು ಸಮಾಪ್ತಿ ಮಾಡಿಬಿಡಿ. ಈಗಲೇ ಆದರೆ ಅಂತ್ಯದಲ್ಲಿಯೂ ಆಗುತ್ತೀರಿ. ಈಗಿಲ್ಲದಿದ್ದರೆ ಅಂತ್ಯದಲ್ಲಿಯೂ ಇಲ್ಲ. ಆದ್ದರಿಂದ ಈ ಹುಡುಗಾಟಿಕೆಯ ನಿದ್ರೆಯಿಂದಲೂ ಜಾಗೃತರಾಗಿ ಬಿಡಬೇಕು. ಇದಲ್ಲಿಯೂ ಮಲಗಿದಿರೆಂದರೆ ಕಳೆದುಕೊಳ್ಳಬೇಕಾಗುತ್ತದೆ. ಆನಂತರ ದೂರನ್ನು ಕೊಡಬಾರದು- ಅಂತ್ಯದಲ್ಲಿ ಸಂಪೂರ್ಣರಾಗಬೇಕೆಂದು ನಾವು ತಿಳಿದಿದ್ದೆವು. ಅಂತ್ಯದಲ್ಲಿ ಸಂಪೂರ್ಣರಾಗುವ ಅರ್ಥವನ್ನೂ ಸಹ ತಿಳಿದುಕೊಳ್ಳಿರಿ. ಯಾವುದೇ ವಿಶೇಷವಾದ ಬಲಹೀನತೆಯನ್ನು ಅಂತ್ಯದಲ್ಲಿ ಸಂಪೂರ್ಣಗೊಳಿಸುತ್ತೇವೆ ಎಂಬ ಸಂಕಲ್ಪವನ್ನೆಂದಿಗೂ ತರಬಾರದು. ಪುರುಷಾರ್ಥವನ್ನು ಮಾಡುತ್ತಾ, ಬ್ರಾಹ್ಮಣ ಜೀವನದ ಆಭರಣಗಳನ್ನೂ ಈಗಲೇ ತಯಾರು ಮಾಡಿಕೊಳ್ಳಬೇಕಾಗಿದೆ. ಮರ್ಯಾದೆಗಳು ಮತ್ತು ನಿಯಮಗಳನ್ನು ಪಾಲನೆ ಮಾಡುವ ಆಭರಣವನ್ನೂ ಈಗಿನಿಂದ ಧರಿಸಬೇಕಾಗಿದೆ. ಪಾಲಿಷ್ ಸಹ ಈಗ ಮಾಡಬೇಕಾಗಿದೆ. ಅಂತ್ಯದಲ್ಲಂತು ಕೇವಲ ಪಾಲಿಷ್ ಮಾಡಿರುವುದಕ್ಕೆ ನಿಮಿತ್ತ ಮಾತ್ರವಾಗಿ ಕೈಯಾಡಿಸಲಾಗುತ್ತದೆ. ಅಷ್ಟೆ. ಆ ಸಮಯದಲ್ಲಿ ಪಾಲಿಷ್ ಮಾಡಲೂ ಸಾಧ್ಯವಿಲ್ಲ. ಕೇವಲ ಅನ್ಯಆತ್ಮರ ಶ್ರೇಷ್ಠ ಸೇವೆಯ ಪ್ರತಿ ಸಮಯ ದೊರೆಯುತ್ತದೆ. ಆ ಸಮಯದಲ್ಲಿ ಪುರುಷಾರ್ಥದ ಸ್ವರೂಪ ಇರುವುದಿಲ್ಲ. ಮಾಸ್ಟರ್ ದಾತ ಸ್ವರೂಪ ಇರುತ್ತದೆ. ಕೊಡುವುದೇ ತೆಗೆದುಕೊಳ್ಳುವುದಾಗುತ್ತದೆ. ಕೇವಲ ತೆಗೆದುಕೊಳ್ಳುವುದು ಸಮಾಪ್ತಿಯಾಯಿತೆಂದರೆ ಪಾಲಿಷ್ ಹೇಗೆ ಮಾಡುವಿರಿ! ಒಂದು ವೇಳೆ ತಮ್ಮಲ್ಲಿ ಆಭರಣಗಳನ್ನು ಧರಿಸುವುದರಲ್ಲಿಯೇ ಇರುತ್ತೀರೆಂದರೆ ವಿಶ್ವಕಲ್ಯಾಣಕಾರಿಯ ಪಾತ್ರವನ್ನಭಿನಯಿಸಲು ಸಾಧ್ಯವಿಲ್ಲ. ಇದಕ್ಕಾಗಿ ಈಗ ಮಾಸ್ಟರ್ ರಚಯಿತನಾಗುವ ಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳಿರಿ. ಬಾಲ್ಯದ ಸಂಸ್ಕಾರವನ್ನು ಸಮಾಪ್ತಿ ಮಾಡಿರಿ. ಮಾಸ್ಟರ್ ರಚಯಿತನಾಗಿದ್ದು ಪ್ರಾಪ್ತಿಯಾಗಿರುವ ಶಕ್ತಿಗಳು ಅದರ ಜ್ಞಾನ, ಗುಣ ಅಥವಾ

ಸರ್ವಖಜಾನೆಗಳನ್ನೂ ಅನ್ಯರಪ್ರತಿ ವದಾನಿಯಾಗಿ, ಮಹಾಜ್ಞಾನಿಯಾಗಿ, ಮಹಾದಾನಿಯಾಗಿ ಕೊಡುತ್ತಾ ಸಾಗಬೇಕು. ವರದಾನಿ ಅರ್ಥಾತ್ ತಮ್ಮ ಶಕ್ತಿಗಳ ಮೂಲಕ ವಾಯುಮಂಡಲ ಅಥವಾ ವೈಬ್ರೇಷನ್‌ನ ಪ್ರಭಾವದಿಂದ ಅತ್ಮರನ್ನು ಪರಿವರ್ತನೆ ಮಾಡುವುದಾಗಿದೆ. ಮಹಾಜ್ಞಾನಿ ಅರ್ಥಾತ್ ವಾಣಿ ಅಥವಾ ಸೇವೆಯ ಸಾಧನೆಗಳ ಮೂಲಕ ಆತ್ಮರನ್ನು ಪರಿವರ್ತನೆ ಮಾಡುವುದಾಗಿದೆ. ಮಹಾದಾನಿ ಅರ್ಥಾತ್ ಸಂಪೂರ್ಣ ನಿರ್ಬಲ, ಹೃದಯವಿಧೀರ್ಣ, ಅಸಮರ್ಥ ಆತ್ಮರಿಗೆ ವಿಶೇಷವಾದ ಶಕ್ತಿಯನ್ನು ಕೊಟ್ಟು ಆತ್ಮಿಕ ದಯಾಹೃದಯಿಯಾಗಬೇಕು. ಮಾಯೆಯ ಮೇಲೆ ದಯಾಹೃದಯಿಯಾಗುವುದೂ ಇರುತ್ತದೆ. ಯಾವುದೇ ತಪ್ಪು ಕರ್ಮವಾಗುತ್ತಿದೆ ಮತ್ತು ತಾವು ದಯೆ ತೋರಿಸುತ್ತಿದ್ದೀರೆಂದರೆ, ಇದು ಮಾಯೆಯ ದಯಾಹೃದಯಿ ಆಗುವುದು. ಇಂತಹ ಸಮಯದಲ್ಲಿ ಲಾಫುಲ್ ಆಗಲೇಬೇಕಾಗುತ್ತದೆ. ಇರುವುದು ಸೆಳೆತವಾಗಿದೆ ಆದರೆ ದಯೆ ಎಂದು ತಿಳಿದುಕೊಳ್ಳುತ್ತಾರೆ. ಇದಕ್ಕೆ ಮಾಯೆಯ ದಯೆಯೆಂದು ಹೇಳಲಾಗುತ್ತದೆ. ಇಂತಹ ದಯಾಹೃದಯಿ ಆಗಬಾರದು ಆದ್ದರಿಂದ ಹೇಳಿದೆವು- ಆತ್ಮಿಕ ದಯಾಹೃದಯಿ. ಇಲ್ಲವೆಂದರೆ ದಯಾಹೃದಯ ಎಂಬ ಶಬ್ದವನ್ನೂ ಬೇಕಾದ ಹಾಗೆ ಉಪಯೋಗಿಸಿ ಬಿಡುತ್ತಾರೆ. ಅಂದಮೇಲೆ ಮಹಾದಾನಿ ಅರ್ಥಾತ್ ಸಂಪೂರ್ಣ ಭರವಸೆಯಿಲ್ಲದ ಕೇಸ್‌ನಲ್ಲಿಯೂ ಭರವಸೆಯನ್ನು ಉತ್ಪನ್ನಗೊಳಿಸುವುದು. ಅವರಲ್ಲಿ ತಮ್ಮ ಶಕ್ತಿಗಳ ಆಧಾರದಿಂದ ಸಹಯೋಗ ಕೊಡುವುದು ಅರ್ಥಾತ್ ಮಹಾದಾನ ಕೊಡುವುದು, ಇದು ಪ್ರಜೆಗಳಿಗಾಗಿ ಕೊಡುವುದಾಗಿದೆ. ವಾರಸುದಾರ ಕ್ವಾಲಿಟಿಯವರಿಗೆ ಮಹಾದಾನಿಯಾಗಬಾರದು. ದಾನವು ಸದಾ ಬಡಪ್ರಜೆಗಳಿಗೆ ಕೊಡಲಾಗುತ್ತದೆ. ನಿರ್ಗತಿಕರಿಗೆ ಬೆಂಬಲ ಕೊಡಲಾಗುತ್ತದೆ. ಪ್ರಜೆಗಳ ಬಗ್ಗೆ ಮಹಾದಾನಿ ಅಥವಾ ಅಂತ್ಯದಲ್ಲಿ ಭಕ್ತಾತ್ಮರ ಬಗ್ಗೆ ಮಹಾದಾನಿ, ಪರಸ್ಪರದಲ್ಲಿ ಒಬ್ಬರಿನ್ನೊಬ್ಬರ ಬಗ್ಗೆ ಬ್ರಾಹ್ಮಣರು ಮಹಾದಾನಿಗಳಲ್ಲ. ಅವರಂತೂ ಪರಸ್ಪರದಲ್ಲಿ ಸಹಯೋಗಿ ಜೊತೆಗಾರರಾಗಿರುತ್ತಾರೆ. ಸಹೋದರ-ಸಹೋದರರಾಗಿದ್ದೀರಿ ಅಥವಾ ಸಮಾನ ಪುರುಷಾರ್ಥಿ ಆಗಿರುತ್ತೀರಿ. ಸಹಯೋಗವನ್ನು ಕೊಡಿ, ದಾನವನ್ನು ಕೊಡುವುದಿಲ್ಲ. ತಿಳಿಯಿತೆ! ಅಂದಮೇಲೆ ಈಗ ಈ ಸಂಕಲ್ಪವನ್ನೂ ಸಮಾಪ್ತಿ ಮಾಡಿಬಿಡಿ. ಕೆಲವೊಮ್ಮೆ ಆಗಿಬಿಡುತ್ತದೆ, ಈ 'ಕೆಲವೊಮ್ಮೆ' ಎಂಬ ಶಬ್ದವೂ ಸಮಾಪ್ತಿ. ತೀವ್ರಪುರುಷಾರ್ಥಿಯು 'ಯಾವಗಲೋ' ಎನ್ನುವುದಿಲ್ಲ ಆದರೆ 'ಈಗ' ಎಂದು ಹೇಳುತ್ತಾರೆ. ಅಂದಮೇಲೆ ಸದಾ ತೀವ್ರಪುರುಷಾರ್ಥಿಯಾಗಿರಿ.

**ಇಂತಹ ಸದಾ ವಿಶ್ವಕಲ್ಯಾಣಕಾರಿ, ಮಹಾನ್ ಪವಿತ್ರ ಆತ್ಮರು, ಸಂಕಲ್ಪ ಅಥವಾ ಸ್ವಪ್ನದಲ್ಲಿಯೂ ಅಪವಿತ್ರತೆಯಿಂದ ದೂರವಿರುವಂತಹ ಪರಮಪೂಜ್ಯ, ಈಗಲೂ ಮಾನ್ಯತೆಯಿರುವ ಗಾಯನಯೋಗ್ಯರು, ಕರ್ಮಯೋಗಿ, ಸದಾ ಸ್ವ-ಸಂಕಲ್ಪ ಹಾಗೂ ಸ್ವರೂಪದ ಮೂಲಕ ಸೇವಾಧಾರಿ, ಇಂತಹ ಪುಣ್ಯಾತ್ಮರಿಗೆ, ವರದಾನಿ-ಮಹಾದಾನಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಪಾರ್ಟಿಯೊಂದಿಗೆ.**

ಎಲ್ಲರೂ ಎವರೆಡಿ ಮತ್ತು ಆಲ್‌ರೌಂಡರ್ ಆಗಿದ್ದೀರಾ? ಎವರೆಡಿ ಎಂದರೆ ಆದೇಶ ಬಂದಿತು ಮತ್ತು ಹೊರಟೆವು ಅರ್ಥಾತ್ ಆದೇಶ ಸಿಕ್ಕಿತು ಮತ್ತು ಹಾಂಜಿ, ಏನು ಮಾಡಲಿ ಹೇಗೆ ಮಾಡಲಿ?- ಎನ್ನುವುದಿರುವುದಿಲ್ಲ. ಏನಾಗುತ್ತದೆ, ಹೇಗಾಗುತ್ತದೆ, ನಡೆಯಲು ಸಾಧ್ಯವೋ ಅಥವಾ ಇಲ್ಲವೋ? ಇಂತಹ ಸಂಕಲ್ಪವು ಬಂದಿತೆಂದರೆ ಎವರೆಡಿ ಯೆಂದು ಹೇಳಲಾಗುವುದಿಲ್ಲ. ತೀವ್ರಪುರುಷಾರ್ಥಿಯ ವಿಶೇಷತೆಯೇ ಎವರೆಡಿಯಾಗಿರುವುದು ಮತ್ತು ಆಲ್‌ರೌಂಡರ್ ಆಗಿರುವುದಾಗಿದೆ. ಮನಸಾಸೇವೆಯ ಅವಕಾಶವು ಸಿಗಲಿ ಅಥವಾ ವಾಚಾಸೇವೆಯ ಅವಕಾಶ ಸಿಗಲಿ ಅಥವಾ ಕರ್ಮಣಾ ಸೇವೆಯ ಅವಕಾಶವೇ ಸಿಗಲಿ ಆದರೆ ಪ್ರತಿಯೊಂದು ವಿಷಯದಲ್ಲಿ ನಂಬರ್‌ವನ್. ಈ ರೀತಿಯಾಗಬಾರದು- ವಾಚಾದಲ್ಲಿ ನಂಬರ್‌ವನ್, ಕರ್ಮಣಾದಲ್ಲಿ ನಂಬರ್ ಟು ಮತ್ತು ಮನಸಾಸೇವೆಯಲ್ಲಿ ನಂಬರ್ ತ್ರಿ, ಎಷ್ಟು ಸ್ನೇಹದಿಂದ ವಾಚಾಸೇವೆ ಮಾಡುತ್ತೀರೋ ಅಷ್ಟೇ ಮನಸಾಸೇವೆಯನ್ನೂ ಮಾಡಬಹುದು ಮನಸಾಸೇವೆಯ ಅಭ್ಯಾಸವನ್ನು ವೃದ್ಧಿ

ಮಾಡಿಕೊಳ್ಳಿರಿ. ವಾಚಾಸೇವೆಯಂತು 7 ದಿನದ ಕೋರ್ಸ್‌ನಲ್ಲಿರುವ ಪ್ರವೃತ್ತಿಯವರೂ ಮಾಡಬಹುದು. ತಮ್ಮ ಕಾರ್ಯವಾಗಿದೆ- ವಾಯುಮಂಡಲವನ್ನು ಶಕ್ತಿಶಾಲಿ ಮಾಡುವುದು. ತಮ್ಮ ಸ್ಥಾನದ, ನಗರದ, ಭಾರತದ ಹಾಗೂ ವಿಶ್ವದ ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ಮಾಡಿರಿ. ಪರಿಶೀಲನೆ ಮಾಡಿ- ಮನಸಾಸೇವೆಯಲ್ಲಿ ಸಫಲತೆಯು ಸಿಕ್ಕಿತೆ? ಒಂದು ವೇಳೆ ಮನಸಾಸೇವೆಯಲ್ಲಿ ಸಫಲತೆಯಾಯಿತೆಂದರೆ ಇದರಿಂದ ಸದಾ ಸ್ವಯಂ ಹಾಗೂ ಸೇವಾಕೇಂದ್ರ ನಿರ್ವಿಘ್ನ ಹಾಗೂ ಏರುವಕಲೆಯಲ್ಲಿರುತ್ತದೆ. ಸಂಖ್ಯೆಯ ವೃದ್ಧಿಯಾದರೆ ಏರುವಕಲೆಯೆಂದು ಹೇಳುವುದಿಲ್ಲ. ಏರುವಕಲೆಯು ಸಂಖ್ಯೆಯಲ್ಲಿಯೂ, ಕ್ವಾಲಿಟಿಯೂ ಮತ್ತು ವಾಯುಮಂಡಲ ಹಾಗೂ ಸ್ವಯಂ ಜೊತೆಗಾರರಲ್ಲಿಯೂ ಏರುವಕಲೆಯಾಗಬೇಕು, ಇದಕ್ಕೆ 'ಏರುವಕಲೆ' ಎಂದು ಹೇಳಲಾಗುತ್ತದೆ. ಅಂದಮೇಲೆ ಈ ರೀತಿ ಅನುಭವ ಮಾಡುತ್ತೀರಾ? ಅಮೃತವೇಳೆಯಲ್ಲಿ ಸ್ವಯಂ ಶಕ್ತಿಶಾಲಿಯಾಗಿರುತ್ತೀರಾ? ಅಮೃತವೇಳೆಯಲ್ಲಿ ಹುಡುಗಾಟಿಕೆಯ ವಿಘ್ನಗಳು ಬರುತ್ತವೆ ಎನ್ನುವಂತಿಲ್ಲ. ಇಂತಹ ಶಕ್ತಿಶಾಲಿ ಅಮೃತವೇಳೆಯಿದೆಯೇ, ಅದರಿಂದ ವಿಶ್ವಕ್ಕೆ ಲೈಟ್ ಮತ್ತು ಮೈಟ್‌ನ ವರದಾನವನ್ನು ಕೊಡಲು ಸಾಧ್ಯವೇ? ಅಮೃತವೇಳೆಯ ನೆನಪಿನಿಂದ ತಾವು ತಮ್ಮಿಂದ ಸಂತುಷ್ಟವಾಗಿದ್ದೀರಾ?

ಮುಖ್ಯವಾದ ವಿಷಯವೇ ಆಗಿದೆ. ನೆನಪು. ಬಾಪ್‌ದಾದಾ ಅಮೃತವೇಳೆಯಲ್ಲಿ ಪರಿಕ್ರಮಣವನ್ನು ಹಾಕುತ್ತಾರೆ. ಆಗ ಶಕ್ತಿಶಾಲಿ ಪ್ರಕಂಪನಗಳು ಸ್ವಲ್ಪ ಕಡಿಮೆ ಕಂಡು ಬರುತ್ತದೆ. ನಾಮಮಾತ್ರ ಮಾಡುವವರಾಗಿ ಬಿಡುತ್ತಾರೆ, ಆದರೆ ಅನುಭವೀ ಮೂರ್ತಿಯಾಗಬೇಕು. ನಿಯಮದನುಸಾರವಂತು ಜಬರ್ದಸ್ಥಿ ಆಯಿತಲ್ಲವೆ. ಒಂದು ವೇಳೆ ಅನುಭವವಾಯಿತೆಂದರೆ ತಮ್ಮ ಲಗನ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಯಾವ ಮಾತಿನ ಅನುಭವವಾಗುತ್ತದೆಯೋ, ಅದರಿಂದ ಬಯಸದಿದ್ದರೂ ಆ ಮಾತಿನ ಕಡೆಗೆ ಸೆಳೆಯುತ್ತದೆ. ಹೇಗೆ ವಾಚಾಸೇವೆಯಿಂದ ಖುಷಿಯ ಅನುಭವವಾಗುತ್ತದೆ, ಆಗ ಬಯಸದಿದ್ದರೂ ಆಕಡೆಗೆ ಓಡುತ್ತೀರಲ್ಲವೆ. ಅದೇ ರೀತಿ ಅಮೃತವೇಳೆಯನ್ನು ಶಕ್ತಿಶಾಲಿ ಮಾಡಿಕೊಳ್ಳಬೇಕು. ಇದರಿಂದ ಮನಸಾಸೇವೆಯ ಅನುಭವವು ವೃದ್ಧಿಯಾಗಲು ಸಾಧ್ಯವಿದೆ. ಅಂತ್ಯದಲ್ಲಿ ವಾಚಾಸೇವೆಯ ಅವಕಾಶವಿರುವುದಿಲ್ಲ. ಮನಸ್ಸಾಸೇವೆಯಲ್ಲಿ ಸರ್ಟಿಫಿಕೇಟ್ ಸಿಗುತ್ತದೆ. ಏಕೆಂದರೆ ಇಷ್ಟು ಉದ್ದವಾದ ಕ್ಯೂ ಆಗುತ್ತದೆ. ಅದನ್ನು ಹೇಳಲೂ ಸಾಧ್ಯವಿಲ್ಲ. ಹೇಗೆ ಈಗಲೂ ಮೇಳ ಮಾಡುತ್ತೀರೆಂದರೆ, ಗುಂಪಿರುವ ಸಮಯದಲ್ಲಿ ಏನು ಮಾಡುತ್ತೀರಿ? ಶಾಂತಿಯಿಂದ ಅವರಿಗೆ ಶುಭಭಾವನೆ ಮತ್ತು ಕಾಮನೆಯಿಂದ ದೃಷ್ಟಿ ಕೊಡುತ್ತೀರಲ್ಲವೆ. ಅಂದಮೇಲೆ ಅಂತ್ಯದಲ್ಲಿಯೂ ಯಾವಾಗ ಪ್ರಭಾವ ಬೀರುತ್ತದೆಯೆಂದರೆ ಏನಾಗುತ್ತದೆ? ಈಗಂತು ಸ್ಥೂಲವಾದ ಪ್ರಕಾಶತೆಯ ಪ್ರಭಾವದಿಂದ ಬರುತ್ತಾರೆ. ನಂತರ ಆ ಸಮಯದಲ್ಲಿ ತಾವು ಆತ್ಮರ ಪ್ರಕಾಶತೆಯ ಪ್ರಭಾವವಿರುತ್ತದೆ. ಆ ಸಮಯದಲ್ಲಿ ಮನಸಾ ಸೇವೆಯನ್ನು ಮಾಡಬೇಕಾಗುತ್ತದೆ. ದೃಷ್ಟಿಯಿಂದ ಪರಿವರ್ತನೆ ಮಾಡಬೇಕಾಗುತ್ತದೆ. ತಮ್ಮ ವೃತ್ತಿಯಿಂದ ಅವರ ವೃತ್ತಿಯನ್ನು ಪರಿವರ್ತನೆ ಮಾಡಬೇಕಾಗುತ್ತದೆ. ತಮ್ಮ ಸ್ಮೃತಿಯಿಂದ ಅವರನ್ನು ಸಮರ್ಥರನ್ನಾಗಿ ಮಾಡಬೇಕಾಗುತ್ತದೆ. ನಂತರ ಆ ಸಮಯದಲ್ಲಿ ಭಾಷಣ ಮಾಡುತ್ತೀರಾ? ಆದ್ದರಿಂದ ಮನಸಾಸೇವೆಯ ಅಭ್ಯಾಸದ ಅವಶ್ಯಕತೆಯಿದೆ. ಅನುಭವಿಮೂರ್ತಿ ಆಗಿಬಿಡಿ, ಅದರಿಂದ ಅನ್ಯರಿಗೆ ಹೇಳಿರಿ. ಅದನ್ನೂ ಸ್ವಯಂನ ಅನುಭವದ ಆಧಾರದಿಂದ ಹೇಳಬೇಕು ತಿಳಿಯಿತೆ! ಮನಸ್ಸಾ ಸೇವೆಯನ್ನು ವೃದ್ಧಿ ಮಾಡಿಕೊಳ್ಳಿರಿ. ಈಗ ನಿರ್ವಿಘ್ನ ವಾಯುಮಂಡಲವನ್ನು ತಯಾರು ಮಾಡಿರಿ, ಇದರಲ್ಲಿ ಯಾವುದೇ ಆತ್ಮನು ವಿಘ್ನರೂಪವಾಗುವ ಸಾಹಸವಿರಬಾರದು. ವಿಘ್ನವು ಬಂದಿತು ಸಮಾಪ್ತಿ ಮಾಡಿದಿರೆಂದರೆ, ಇದರಲ್ಲಿಯೂ ಸಮಯವು ವ್ಯರ್ಥವಾಯಿತು. ಅಂದಾಗ ಈಗ ಕೋಟೆಯನ್ನು ಶಕ್ತಿಶಾಲಿಯನ್ನಾಗಿ ಮಾಡಬೇಕು. ಪರಸ್ಪರದಲ್ಲಿ ಸ್ನೇಹಿ-ಸಹಯೋಗಿಯಾಗಿರುತ್ತಾ ನಡೆದಾಗ ಎಲ್ಲರೂ ಅನುಸರಿಸುತ್ತಾರೆ. ಸ್ವಯಂ ತಾವೇನು ಮಾಡುತ್ತೀರಿ, ಅನುಸರಿಸುತ್ತಾರೆ. ಹಾಗೆಯೇ ಎಲ್ಲರೂ 2. ಎಲ್ಲರೂ ಅಂಗಧನ ಸಮಾನ ಅಚಲ-ಅಡೋಲರಾಗಿರುವವರಲ್ಲವೆ. ರಾವಣರಾಜ್ಯದ ಯಾವುದೇ ಪರಿಸ್ಥಿತಿ ಅಥವಾ ವ್ಯಕ್ತಿಯು ಸಂಕಲ್ಪದ ರೂಪದಲ್ಲಿಯೂ ಅಲುಗಾಡಿಸಲು ಸಾಧ್ಯವಾಗಬಾರದು. ಉಗುರನ್ನೂ ಅಲುಗಾಡಿಸಲು ಸಾಧ್ಯವಾಗಬಾರದು. ಸಂಕಲ್ಪದಲ್ಲಿ ಅಲುಗಾಡುವುದು ಅರ್ಥಾತ್ ಉಗುರಷ್ಟು ಅಲುಗಾಡುವುದು. ಅಂದಾಗ ಸಂಕಲ್ಪ ರೂಪದಲ್ಲಿಯೂ ಯಾವುದೇ ವ್ಯಕ್ತಿಯಾಗಲಿ, ಪರಿಸ್ಥಿತಿಯಾಗಲಿ ಅಲುಗಾಡಿಸಲು ಸಾಧ್ಯವಾಗಬಾರದು, ಕೆಲವೊಮ್ಮೆ ಯಾವುದೇ ಸಂಬಂಧಿ ಅಥವಾ ದೈವೀ ಪರಿವಾರದರವರೂ ಸಹ ನಿಮಿತ್ತರಾಗಿಬಿಡುತ್ತಾರೆ. ಅವರು ವಿಘ್ನರೂಪವಾಗಿಬಿಡುತ್ತಾರೆ. ಆದರೆ

ಅಂಗಧನ ಸಮಾನವಿರುವವರು ಸದಾ ಅಚಲರಾಗಿರುವವರು, ಅವರು ವ್ಯಕ್ತಿ, ವಿಘ್ನ ಮತ್ತು ಪರಿಸ್ಥಿತಿಯನ್ನೂ ಪಾರು ಮಾಡಿಬಿಡುತ್ತಾರೆ ಏಕೆಂದರೆ ಜ್ಞಾನಪೂರ್ಣರಾಗಿರುತ್ತಾರೆ. ಅವರು ತಿಳಿದಿರುತ್ತಾರೆ ಈ ವಿಘ್ನವು ಏಕೆ ಬಂದಿದೆ? ಈ ವಿಘ್ನವು ಬೀಳಿಸುವುದಕ್ಕಾಗಿ ಇರುವುದಲ್ಲ ಆದರೆ ಇನ್ನೂ ಶಕ್ತಿಶಾಲಿಯನ್ನಾಗಿ ಮಾಡುವುದಕ್ಕಾಗಿ ಇದೆ. ಅವರು ಗೊಂದಲದಲ್ಲಿರುವುದಿಲ್ಲ. ಹೇಗೆ ಪರೀಕ್ಷೆಯ ಸ್ಥಳದಲ್ಲಿ ಪರೀಕ್ಷಾಪತ್ರಿಕೆಯು ಯಾವಾಗ ಬರುತ್ತದೆ, ಅದರಿಂದ ಬಲಹೀನವಾಗಿರುವ ವಿದ್ಯಾರ್ಥಿಯು ತಬ್ಬಿಬ್ಬಾಗಿಬಿಡುತ್ತಾನೆ. ಒಳ್ಳೆಯ ವಿದ್ಯಾರ್ಥಿಯನ್ನು ನೋಡಿ ಖುಷಿಯಾಗುತ್ತದೆ ಏಕೆಂದರೆ ಈ ಪರೀಕ್ಷೆಯಲ್ಲಿ ಬರೆದು ಮುಂದಿನ ತರಗತಿಯಲ್ಲಿ ಹೋಗುತ್ತಾರೆಂದು ಬುದ್ಧಿಯಲ್ಲಿರುತ್ತದೆ. ಅವರಿಗೆ ಕಷ್ಟವೆನಿಸುವುದಿಲ್ಲ. ಬಲಹೀನರು ಪ್ರಶ್ನೆಯನ್ನೇ ಎಣಿಸುತ್ತಿರುತ್ತಾರೆ- ಈ ಪ್ರಶ್ನೆಯೇಕೆ ಬಂದಿದೆ, ಇದನ್ನು ಯಾರು ತಯಾರು ಮಾಡಿದರು, ಏಕೆ ಮಾಡಿದರು. ಅದೇರೀತಿ ಇಲ್ಲಿಯೂ ಸಹ ಪರೀಕ್ಷೆಯಾಗಿ ಯಾರೇ ನಿಮಿತ್ತರಾಗಿ ಬರುತ್ತಾರೆಂದರೆ, ಈ ಪ್ರಶ್ನೆಯು ಉತ್ಪತ್ತಿಯಾಗಬಾರದು- ಇವರೇಕೆ ಮಾಡುತ್ತಾರೆ, ಈ ರೀತಿ ಮಾಡಬಾರದು. ಏನೆಲ್ಲವೂ ಆಯಿತು ಒಳ್ಳೆಯದಾಯಿತು, ಒಳ್ಳೆಯ ಮಾತನ್ನು ತೆಗೆದುಕೊಳ್ಳಬೇಕು. ಹೇಗೆ ಹಂಸವು ಮುತ್ತನ್ನು ಆರಿಸುತ್ತದೆಯಲ್ಲವೆ, ಕಲ್ಲನ್ನು ಬೇರ್ಪಡಿಸುತ್ತದೆ. ಹಾಲು ಮತ್ತು ನೀರನ್ನು ಬೇರ್ಪಡಿಸುತ್ತದೆ. ಹಾಲನ್ನು ತೆಗೆದುಕೊಳ್ಳುತ್ತದೆ, ನೀರನ್ನು ಬಿಟ್ಟುಬಿಡುತ್ತದೆ. ಹಾಗೆಯೇ ಯಾವುದೇ ಮಾತುಗಳು ಮುಂದೆ ಬರುತ್ತದೆಯೆಂದರೆ ನೀರು ಎಂದು ತಿಳಿದುಕೊಂಡು ಬಿಟ್ಟುಬಿಡಬೇಕು. ಯಾರೇ ಮಿಕ್ಸ್ ಮಾಡಿದರು, ಏಕೆ ಮಾಡಿದರು ಎನ್ನಬಾರದು. ಇದರಲ್ಲಿಯೂ ಸಮಯವು ವ್ಯರ್ಥವಾಗಿ ಬಿಡುತ್ತದೆ. ಒಂದು ವೇಳೆ ಏಕೆ, ಏನು ಎನ್ನುತ್ತಿದ್ದರೆ, ಪರೀಕ್ಷೆಯ ಅಂತಿಮಗಳಿಗೆಯು ಮುಗಿಯಿತೆಂದರೆ ಅನುತ್ತೀರ್ಣರಾಗಿ ಬಿಡುತ್ತೀರಿ. ವ್ಯರ್ಥ ಮಾಡುವುದು ಎಂದರೆ ಅನುತ್ತೀರ್ಣ ರಾದರು. ಏಕೆ-ಏನು ಎನ್ನುವುದರಲ್ಲಿ ಶ್ವಾಸವು ಹೊರಟುಹೋಗುತ್ತದೆ ಎಂದರೆ ಅನುತ್ತೀರ್ಣ, ಯಾವುದೇ ಮಾತಿನ ಫೀಲ್ ಮಾಡುವುದು ಎಂದರೆ ಅನುತ್ತೀರ್ಣರಾಗುವುದು. ಮಾಯೆಯು ಸಿಂಹದ ರೂಪದಲ್ಲಿಯೇ ಬರಲಿ, ಆದರೆ ತಾವು ಯೋಗಾಗ್ನಿಯನ್ನು ಬೆಳಗಿಸಿಡಬೇಕು, ಅಗ್ನಿಯ ಮುಂದೆ ಯಾವುದೇ ಭಯಾನಕ ಸಿಂಹದಂತ ವಸ್ತುವೂ ಸಹ ಯುದ್ಧ ಮಾಡಲು ಸಾಧ್ಯವಿಲ್ಲ. ಸದಾ ಯೋಗಾಗ್ನಿಯು ಬೆಳಗಿರುತ್ತದೆಯೆಂದರೆ ಮಾಯೆಯು ಯಾವುದೇ ರೂಪದಲ್ಲಿಯೂ ಬರಲು ಸಾಧ್ಯವಿಲ್ಲ. ಎಲ್ಲಾ ವಿಘ್ನಗಳೂ ಸಮಾಪ್ತಿಯಾಗಿಬಿಡುತ್ತವೆ.

ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 23-01-1980.

***ಪವಿತ್ರತೆಯ ಮಹತ್ವ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಮಹಾನ್ ಆತ್ಮ, ಧರ್ಮಾತ್ಮ, ಪುಣ್ಯಾತ್ಮ & ಮಹಾನ್ ಪವಿತ್ರಾತ್ಮ.

2. ನಾನು ಪವಿತ್ರತೆಯನ್ನು ಧಾರಣೆ ಮಾಡಿ ಪರಮಪೂಜ್ಯನೀಯವಾಗಿ, ಗಾಯನಾಯೋಗ್ಯವಾಗಿ ತಯಾರಾಗಿದ್ದೇನೆ.

3. ನಾನು ಪವಿತ್ರವಾಗಿದ್ದು, ಎಲ್ಲರನ್ನು ಪವಿತ್ರವಾಗಿ ತಯಾರು ಮಾಡುವ ಪುಣ್ಯಾತ್ಮ.

4. ನಾನು ಪರಮಾತ್ಮನಿಂದ ಪವಿತ್ರ ಭವ!, ಯೋಗಿಭವ! ಎಂಬ ವರದಾನವನ್ನು ಸ್ವೀಕರಿಸಿದ್ದೇನೆ.

5. ನಾನು ಸಂಸ್ಕಾರಗಳ ಮಚ್ಚೆಯನ್ನು ತೊಲಗಿಸಿಕೊಂಡು ಪೂರ್ತಿ ಸ್ವಚ್ಛವಾಗಿ, ಶುದ್ಧವಾಗಿರುವ ತೀವ್ರ ಪುರುಷಾರ್ಥಿ.

6. ಬ್ರಾಹ್ಮಣ ಜನ್ಮ ದಿನದಿಂದ ಪವಿತ್ರತೆಯೇ ನನ್ನ ಸ್ವತಃ ಸಂಸ್ಕಾರವಾಗಿದೆ.

7. ನಾನು ಅಪವಿತ್ರತೆ ಎಂಬ ಸಂಕಲ್ಪದ ಬೀಜವನ್ನು ಯೋಗಾಗ್ನಿಯಲ್ಲಿ ಭಸ್ಮ ಮಾಡಿರುವ ಸಂಪೂರ್ಣ ಸ್ವರೂಪ.

8. ನಾನು ಅಂತಿಮದಲ್ಲಿ ಪಾಸ್ ಆಗಿರುವ ಬಹಳ ಸಮಯದ ಅಭ್ಯಾಸಿ.

9. ನಾನು ಈಶ್ವರೀಯ ಮರ್ಯಾದೆ ಮತ್ತು ನಿಯಮಗಳ ಪಾಲನೆಯ ಆಭರಣವನ್ನು ಈಗಲೇ ಧರಿಸಿರುವ ವಿಶ್ವಕಲ್ಯಾಣಕಾರಿ.

10. ನಾನು ಮಾಸ್ಟರ್ ರಚಯಿತನಾಗಿ ಲಭಿಸಿರುವ ಶಕ್ತಿಗಳನ್ನು ಅಥವಾ ಜ್ಞಾನದ ಗುಣಗಳನ್ನು ಮತ್ತು ಸರ್ವಖಜಾನೆಗಳನ್ನು ಅನ್ಯರಪ್ರತಿ ವರದಾನಿ, ಮಹಾಜ್ಞಾನಿ, ಮಹದಾನಿಯಾಗಿ ಕೊಟ್ಟಿದ್ದೇನೆ.

11. ನಾನು ನನ್ನ ಶಕ್ತಿಗಳಿಂದ ವಾಯುಮಂಡಲ ಅಥವಾ ತರಂಗಗಳ ಪ್ರಭಾವದಿಂದ ಆತ್ಮರನ್ನು ಪರಿವರ್ತನೆ ಮಾಡಿರುವ ವರದಾನಿ.

12. ನಾನು ವಾಣಿಯಿಂದ ಅಥವಾ ಸೇವಾ ಸಾಧನೆಗಳಿಂದ ಆತ್ಮರ ಪರಿವರ್ತನೆಯನ್ನು ಮಾಡಿರುವ ಮಹಾಜ್ಞಾನಿ.

13. ನಾನು ಪೂರ್ಣ ನಿರ್ಬಲರಿಗೆ ಮತ್ತು ಹೃದಯವಿಧೀರ್ಣ ಅಸಮರ್ಥ ಆತ್ಮರಿಗೆ ಶಕ್ತಿಯನ್ನು ಕೊಟ್ಟು ಆತ್ಮಿಕ ದಯಾ ಹೃದಯಿಯಾಗಿ ಭರವಸೆ ಇಲ್ಲದ ಕೇಸುಗಳಲ್ಲಿಯೂ ಭರವಸೆಯನ್ನು ಉತ್ಪನ್ನಗೊಳಿಸಿದ್ದೇನೆ.

14. ನಾನು "ಯಾವಾಗಲೋ" ಎಂಬುದನ್ನು ಈಗಲೇ ಮಾಡುವ ತೀವ್ರಪುರುಷಾರ್ಥಿ.